

ಚಿತ್ರಕೃಪೆ: ವಿಕಿಪೀಡಿಯ

# ನಿಕೊಲಾಯ್ ಚೌಸೆಸ್ಕೊ (1918–1989)

ರೊಮೇನಿಯಾದ ಈ ಕಮ್ಯುನಿಸ್ಟ್ ರಾಜಕಾರಣಿ 1967 ರಿಂದ 1989ರವರೆಗೆ ಆ ದೇಶದ ಅಧ್ಯಕ್ಷರಾಗಿದ್ದರು. ಜೊತೆಗೆ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರು.

ಅವರ ಆಳ್ವಿಕೆಯ ಮೊದಲ ಕೆಲವು ವರ್ಷಗಳಲ್ಲಿ ಒಳ್ಳೆಯ ಆಡಳಿತವನ್ನು ಕೊಟ್ಟರೂ, ನಿಧಾನವಾಗಿ ಅವರು ಒಬ್ಬ ಸರ್ವಾಧಿಕಾರಿಯಾಗಿ ಮಾರ್ಪಟ್ಟರು. ಉತ್ತರ ಕೊರಿಯಾದ ಕಿಮ್ ಇಲ್ ಸುಂಗ್ ಮತ್ತು ಚೀನಾದ ಮಾವೋ ಅವರಿಂದ ಬಹಳಷ್ಟು ಪ್ರಭಾವಿತರಾಗಿದ್ದ ಚೌಸೆಸ್ಕೋ ತಮ್ಮ ಮತ್ತು ತಮ್ಮ ಪತ್ನಿಯ ಸುತ್ತ ಒಂದು ಪ್ರಭಾವಳಿಯನ್ನು ಕಟ್ಟುವುದಕ್ಕೆ ಪ್ರಾರಂಭಿಸಿದರು. ಮೊದಮೊದಲು ಅವರು ಸೋವಿಯತ್ ದೇಶದ ವಿರುದ್ಧ ಇದ್ದಾರೆಂದು ನಂಬಿ ಅಥವಾ ನಂಬಿಸಿಕೊಂಡು, ಪಾಶ್ಚಿಮಾತ್ಯ ದೇಶಗಳು ರೊಮೇನಿಯಾಕ್ಕೆ ಸಾಕಷ್ಟು ಸಾಲ ನೀಡಿದ್ದವು. ಆದರೆ ಅದನ್ನು ಹಿಂದಿರುಗಿಸಲಾಗದೆ ಇದ್ದಾಗ, ಒತ್ತಡಕ್ಕೆ ಮಣಿದು, ಚೌಸೆಸ್ಕೋ 1980 ರ ಮೊದಲ ಭಾಗದಲ್ಲಿ ದೇಶದ ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳೆಲ್ಲವನ್ನೂ ರಫ್ತು ಮಾಡಬೇಕೆಂದು ನಿರ್ದೇಶಿದರು. ಇದರಿಂದ ದೇಶದಲ್ಲಿ ಆಹಾರದ ಕೊರತೆಯುಂಟಾಗಿ ಅಶಾಂತಿಯ ವಾತಾವರಣವುಂಟಾಯಿತು. ಅದನ್ನು ಲೆಕ್ಕಿಸದ ಚೌಸೆಸ್ಕೋ ಈ ಕ್ರಮಗಳು ದೇಶದ ಸಾಲ ತೀರಿಸುವುದಕ್ಕೆ ಅಗತ್ಯವೆಂದರು ಮತ್ತು ತಮ್ಮ ದೇಶ ಮತ್ತೆಂದೂ ಸಾಲ ಮಾಡಬಾರದೆಂಬ ಕಾನೂನು ಮಾಡಿದರು. ಇದೆಲ್ಲದರ ಮಧ್ಯೆ ತಮ್ಮ ಬೃಹತ್ ಅರಮನೆಯನ್ನು ಕಟ್ಟುವುದನ್ನು ಮುಂದುವರಿಸಿದರು. ಅವರ ವಿದೇಶಾಂಗ ಖಾತೆ, ಪತಿ ಪತ್ನಿಯರಿಬ್ಬರಿಗೂ ಬೇರೆ ಬೇರೆ ದೇಶಗಳ ಅತ್ಯುನ್ನತ ಗೌರವಗಳನ್ನು ತಂದು ಕೊಡುತ್ತಿತ್ತು. ರೊಮೇನಿಯಾದ ಜನ ದಂಗೆಯೇಳುತ್ತಿದ್ದಂತೆ, ಬಹುತೇಕ ಗೌರವಗಳನ್ನು ಆ ದೇಶಗಳು ಹಿಂದಕ್ಕೆ ಪಡೆದವು. ಇಂಥ ಚೌಸೆಸ್ಕೋ ಪತ್ನಿ ಎಲೆನಾ ಜೊತೆಗೆ ದೇಶದಿಂದ ಪಲಾಯನ ಮಾಡುತ್ತಿದ್ದಾಗ, ಡಿಸೆಂಬರ್ 25, 1989 ರಂದು ಆ ದೇಶದ ಸೇನೆ ಅವರನ್ನು ಹಿಡಿಯಿತು; ಕ್ಷಿಪ್ರ ನ್ಯಾಯ ನಿರ್ಣಯ ಮಾಡಿ ಅವರಿಬ್ಬರಿಗೂ ಮರಣ ದಂಡನೆ ವಿಧಿಸಲಾಯಿತು. ಅವರ ಕೊನೆಯ ಕೋರಿಕೆಯಂತೆ ದಂಪತಿಯನ್ನು ಒಟ್ಟಾಗಿ ನಿಲ್ಲಿಸಿ ಮೂವರು ಸೈನಿಕರು ಅವರ ಮೇಲೆ ಗುಂಡಿನ ಸುರಿಮಳೆಗೆರೆದರು.

ಕೇಳಿದೆ: 'ನಿಮಗೆ ಈ ಕೆಲಸ ಇಷ್ಟವಾಗುತ್ತದೆಯೇ?' ಅವಳು ನನ್ನನ್ನು ಅನುಮಾನದಿಂದ ನೋಡುತ್ತ, 'ನೀವು ಇದರ ಬಗ್ಗೆ ಲೇಖನ ಬರೆಯುತ್ತೀರೇನು?' ನಾನು ಹೌದೆಂದೆ. 'ದಯವಿಟ್ಟು ನನ್ನ ಹೆಸರನ್ನು ಹಾಕಬೇಡಿ.'

ಈ ಪ್ರಜೆಗಳ ಅರಮನೆಯ ಯೋಜನೆ ಎಷ್ಟು ಅಸಂಬದ್ಧ ಎಂದರೆ, ಅದನ್ನು ಕಟ್ಟುವಾಗ ಎಷ್ಟು ಜನ ಕೆಲಸಗಾರರು ಅಸುನೀಗಿದರು ಎಂಬುದರ ಬಗ್ಗೆ ಬೇರೆ ಬೇರೆ ಸಂಖ್ಯೆಗಳನ್ನು ಉದ್ಧರಿಸುತ್ತಾರೆ ಮತ್ತು ತಾವು ಹೇಳಿದ ಆ ಸಂಖ್ಯೆಯೇ ನಿಖರವೆಂದು ತರ್ಕಿಸುತ್ತಾರೆ.

ಗೈಡ್ ಪ್ರಕಾರ ಹತ್ತು ಸಾವಿರ.